Presented on : 16-10-2024
Registered on : 16-10-2024
Decided on : 21-07-2026
Duration : 1 years, 9 months, 5 days

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನಗಿರಿ**

**ಉಪಸ್ಥಿತರುಃ**

**ಶ್ರೀ. ವಜ್ರೇಶ ಬಿ.ಎ.,ಎಲ್.ಎಲ್.ಬಿ.**
**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ**

**ಅಪರಾಧಿಕ ಪ್ರಕರಣಃ 2743/2024**

**ದಿನಾಂಕ 21 ನೇ ಜುಲೈ 2026**

**ಪಿರ್ಯಾದುದಾರರುಃ** ರಾಜ್ಯ ಸರ್ಕಾರ –
ಸಂತೆಬೆನ್ನೂರು ಪೋಲಿಸ್ ಠಾಣೆ.

**(ಪ್ರತಿನಿಧಿಸುವವರು ಸ.ಸ.ಅಭಿಯೋಜಕರು)**

**:ವಿರುದ್ಧಃ**

**ಆರೋಪಿತರುಃ**

1. ಕೃಷ್ಣಮೂರ್ತಿ
ಬಿನ್ ಗಂಗಾಧರಚಾರ್,
ವಯಸ್ಸುಃ 38 ವರ್ಷ,

2. ರಂಗಸ್ವಾಮಿ
ಬಿನ್ ಗಂಗಾಧರಚಾರ್,
ವಯಸ್ಸುಃ 28 ವರ್ಷ,

3. ರುದ್ರಮ್ಮ
ಕೋಂ ಲೇಟ್ ಗಂಗಾಧರಚಾರ್,
ವಯಸ್ಸುಃ 63 ವರ್ಷ,

4. ಜಯಮ್ಮ
ಕೋಂ ಕಾಳಾಚಾರ್,
ವಯಸ್ಸುಃ 43 ವರ್ಷ,
ಎಲ್ಲರೂ ವಾಸ: ಶಿವಕುಳೆನೂರು ಗ್ರಾಮ,
ಚನ್ನಗಿರಿ ತಾಲ್ಲೂಕು.

**(ಪ್ರತಿನಿಧಿಸುವವರು ಶ್ರೀ. ವೈ.ಎಂ.ರಾಮಚಂದ್ರರಾವ್ –ವಕೀಲರು)**

| | |
|---|---|
| ಅಪರಾಧ ನಡೆದ ದಿನಾಂಕ | 29.06.2024 |
| ಅಪರಾಧ ವರದಿ ಮಾಡಿದ ದಿನಾಂಕ | 29.06.2024 |
| ದೂರುದಾರರ ಹೆಸರು | ಶಾಂತಮ್ಮ |
| ಸಾಕ್ಷಿದಾರರ ವಿಚಾರಣೆಗೆ ಪ್ರಾರಂಭಿಸಿದ ದಿನಾಂಕ | 11.04.2025 |
| ಸಾಕ್ಷಿದಾರರ ವಿಚಾರಣೆ ಮುಕ್ತಾಯದ ದಿನಾಂಕ | 18.07.2026 |
| ಅಪರಾಧ ಕಲಂಗಳು | ಭಾ.ದಂ.ಸಂ.ಕಲಂ. 447, 504, 323, 354 ಮತ್ತು 506 ಸಹವಾಚಕ ಕಲಂ 34 |
| ತೀರ್ಮಾನ ಹೊರಡಿಸುವ ದಿನಾಂಕ | 21.07.2026 |
| ತೀರ್ಪು | ಆರೋಪದಿಂದ ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಲಾಗಿದೆ. |

ಸಹಿ/–
**(ವಜ್ರೇಶ)**
**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**

## ತೀರ್ಪು

ಸಂತೆಬೆನ್ನೂರು ಪೋಲಿಸ್ ಠಾಣೆಯ ಆರಕ್ಷಕ ಉಪನೀರಿಕ್ಷಕರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 447, 504, 323, 354 ಮತ್ತು 506 ಸಹವಾಚಕ ಕಲಂ 34 ರ ಅಡಿಯಲ್ಲಿ ಅಪರಾಧವೆಸಗಿದ್ದಾರೆಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನಾ ಪಕ್ಷದ ಪ್ರಕರಣದ ಸಾರಾಂಶವೇನೆಂದರೆಃ**

ದಿನಾಂಕ 29.06.2024 ರಂದು ಮಧ್ಯಾಹ್ನ 01.00 ಗಂಟೆ ಸಮಯದಲ್ಲಿ ಚನ್ನಗಿರಿ ತಾಲ್ಲೂಕು, ಸಂತೆಬೆನ್ನೂರು ಪೊಲೀಸ್ ಠಾಣೆಯ ವ್ಯಾಪ್ತಿಯ ದೊಡ್ಡೇರಿಕಟ್ಟೆ ಸರ್ವೆ ನಂ.11 ರ ಸರ್ಕಾರಿ ಅಮೃತ್ ಮಹಲ್ ಕಾವಲು ಜಮೀನಿನಲ್ಲಿ ಚಾಸಾ.4 ಮತ್ತು ಚಾಸಾ.1 ರವರು ಉಳುಮೆ ಮಾಡುತ್ತಿದ್ದಾಗ ಆರೋಪಿತರು ಸದರಿ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಚಾಸಾ.4 ರವರು ಬಿತ್ತನೆ ಮಾಡುವುದನ್ನು ತಡೆದಾಗ ಚಾಸಾ.4 ರವರು ಯಾಕೆ ನಮ್ಮ ಜಮೀನಿಗೆ ನುಗ್ಗಿ ತೊಂದರೆ ಕೊಡುತ್ತೀರಾ ಎಂದು ಕೇಳಿದಾಗ ಆರೋಪಿತರು ಚಾಸಾ.4 ರವರಿಗೆ ಸೂಳೆ ಮಗನೇ ಬೋಳಿ ಮಗನೇ ಇದು ಸರ್ಕಾರಿ ಜಮೀನು ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು, 1 ಮತ್ತು 2 ನೇ ಆರೋಪಿತರು ಚಾಸಾ.1 ರವರ ಕೊರಳಪಟ್ಟಿ ಹಿಡಿದು ಮುಖಕ್ಕೆ, ಭುಜಕ್ಕೆ, ಕೈಕಾಲಿನಿಂದ ಹೊಡೆದಾಗ ಜಗಳ ಬಿಡಿಸಲು ಬಂದ ಚಾಸಾ.4 ರವರಿಗೆ ಹಿಡಿದು ಎಳೆದಾಡಿ ನೆಲಕ್ಕೆ ಕೆಡವಿಕೊಂಡು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತಾರೆಂದು ನಿಮ್ಮನ್ನು ಇವತ್ತು ಇಲ್ಲೇ ಸಾಯಿಸುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ. ದಿನಾಂಕ 29.06.2024 ರಂದು

ಚಾಸಾ.1 ರವರು ಲಿಖಿತ ದೂರನ್ನು ದಾಖಲಿಸಿದ ಮೇರೆಗೆ, ಪೊಲೀಸರು ಪ್ರಥಮ ವರ್ತಮಾನ ವರದಿ ಸ್ವೀಕರಿಸಿ ಸಿ.ಆರ್.ಸಂಖ್ಯೆ 135/2024 ರಂತೆ ಪ್ರಕರಣವನ್ನು ದಾಖಲಿಸಿರುತ್ತಾರೆ.

3. ತನಿಖಾಧಿಕಾರಿಯು ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 447, 504, 323, 354 ಮತ್ತು 506 ಸಹವಾಚಕ ಕಲಂ 34 ರ ಆರೋಪಗಳಿಗೆ ಅಂತಿಮ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ನಂತರ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿದ್ದು, ಜಾಮೀನಿನ ಮೇಲೆ ಬಿಡುಗಡೆಗೊಂಡಿರುತ್ತಾರೆ. ಅಭಿಯೋಜನೆಯ ಪ್ರಕರಣದ ಯಥಾಪ್ರತಿಯನ್ನು ಕಲಂ 207 ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ರೀತ್ಯಾ ಒದಗಿಸಲಾಯಿತು.

4. ನ್ಯಾಯಾಲಯವು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 447, 504, 323 ಮತ್ತು 506 ಸಹವಾಚಕ ಕಲಂ 34 ರ ಅಪರಾಧಗಳಿಗೆ ದೋಷಾರೋಪಣೆಯನ್ನು ರಚಿಸಿರುತ್ತದೆ. ಆರೋಪಿತರು ತಮ್ಮ ಮೇಲೆ ಹೊರಿಸಲಾದ ಮೇಲ್ಕಂಡ ಅಪರಾಧಗಳನ್ನು ಕೇಳಿ ತಿಳಿದುಕೊಂಡು, ನಿರಾಕರಿಸಿ ವಿಚಾರಣೆ ಆಗಬೇಕೆಂದು ಮಂಡಿಸಿದರು.

5. ಆರೋಪಿತರ ಮೇಲಿನ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನಾ ಪರ ಮಾನ್ಯ ಸಹಾಯಕ ಸರ್ಕಾರಿ ವಕೀಲರು ಪ್ರಾಸಾ.1 ಮತ್ತು 2 ರವರ ಮೌಖಿಕ ಸಾಕ್ಷ್ಯ ವಿಚಾರಣೆಯನ್ನು ಮತ್ತು ನಿಶಾನೆ ಪಿ.1 ರಿಂದ ಪಿ.4 ರವರೆಗೆ ದಾಖಲಾತಿ ಸಾಕ್ಷ್ಯವನ್ನು ನಿಶಾನಿಸಿಕೊಂಡಿರುತ್ತಾರೆ. ಅಭಿಯೋಜನೆಯ ಪರ ವಿಚಾರಣೆ ಮಾಡಿದ

ಸಾಕ್ಷಿದಾರರಿಂದ ಆರೋಪಿತರ ವಿರುದ್ಧ ಯಾವುದೇ ಅಪರಾಧ ಸನ್ನಿವೇಶಗಳು ಮೂಡಿ ಬರದ ಕಾರಣ ಕಲಂ 351 ರ ಭಾರತೀಯ ನಾಗರೀಕ ಸುರಕ್ಷ ಸಂಹಿತೆ (313 ದಂಡ ಪ್ರಕ್ರಿಯಾ ಸಂಹಿತೆ) ಅಡಿ ಆರೋಪಿತರ ಹೇಳಿಕೆಗಳನ್ನು ದಾಖಲಿಸಲು ವಿನಾಯಿತಿ ನೀಡಲಾಯಿತು.

6. ಕಡತದಲ್ಲಿನ ಲಭ್ಯ ದಾಖಲೆಗಳ ಆಧಾರದ ಮೇರೆಗೆ ನ್ಯಾಯಾಲಯಕ್ಕೆ ಪರಿಗಣಿಸಬೇಕಾದ ಅಂಶಗಳು ಈ ಕೆಳಕಂಡಂತೆ ಮೂಡಿ ಬಂದವುಃ

**ಅಂಶಗಳು**

1) ದಿನಾಂಕ 29.06.2024 ರಂದು ಮಧ್ಯಾಹ್ನ 01.00 ಗಂಟೆ ಸಮಯದಲ್ಲಿ ಚನ್ನಗಿರಿ ತಾಲ್ಲೂಕು, ಸಂತೆಬೆನ್ನೂರು ಪೊಲೀಸ್ ಠಾಣೆಯ ವ್ಯಾಪ್ತಿಯ ದೊಡ್ಡೇರಿಕಟ್ಟೆ ಸರ್ವೆ ನಂ.11 ರ ಸರ್ಕಾರಿ ಅಮೃತ್ ಮಹಲ್ ಕಾವಲು ಜಮೀನಿನಲ್ಲಿ ಚಾಸಾ.4 ಮತ್ತು ಚಾಸಾ.1 ರವರು ಉಳುಮೆ ಮಾಡುತ್ತಿದ್ದಾಗ ಆರೋಪಿತರು ಸದರಿ ಜಮೀನಿಗೆ ಅಕ್ರಮ ಪ್ರವೇಶ ಮಾಡಿರುತ್ತಾರೆಂದು ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 447 ಸಹವಾಚಕ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

2) ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.4 ರವರಿಗೆ ಸೂಳೆ ಮಗನೇ ಬೋಳಿ ಮಗನೇ ಇದು ಸರ್ಕಾರಿ ಜಮೀನು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆಂದು ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ

ಕಲಂ 504 ಸಹವಾಚ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

3) ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ರವರ ಕೊರಳಪಟ್ಟಿ ಹಿಡಿದು ಮುಖಕ್ಕೆ, ಭುಜಕ್ಕೆ, ಕೈಕಾಲಿನಿಂದ ಹೊಡೆದಾಗ ಜಗಳ ಬಿಡಿಸಲು ಬಂದ ಚಾಸಾ.4 ರವರಿಗೆ ಹಿಡಿದು ಎಳೆದಾಡಿ ನೆಲಕ್ಕೆ ಕೆಡವಿಕೊಂಡು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿರುತ್ತಾರೆಂದು ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

4) ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭದಲ್ಲಿ ಆರೋಪಿತರು ಸಮಾನ ಉದ್ದೇಶದಿಂದ ಚಾಸಾ.1 ಮತ್ತು 4 ರವರಿಗೆ ನಿಮ್ಮನ್ನು ಇವತ್ತು ಇಲ್ಲೇ ಸಾಯಿಸುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಹಾಗೂ ಸದರಿ ಅಪರಾಧವು ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರೀತ್ಯಾ ಶಿಕ್ಷಿಸುವಂತಹ ಅಪರಾಧವಾಗಿದೆ ಎಂದು ಅಭಿಯೋಜನೆಯು ನಿಸ್ಸಂದೇಹವಾಗಿ ರುಜುವಾತುಪಡಿಸುತ್ತದೆಯೇ?

5) ಮಾಡುವ ಆದೇಶವೇನು?

7. ನನ್ನ ತೀರ್ಮಾನಕ್ಕೆ ಉದ್ಭವಿಸಿರುವ ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ ಸಂಖ್ಯೆ 1 ರಿಂದ 4 – ನಕಾರಾತ್ಮಕವಾಗಿ
ಅಂಶ ಸಂಖ್ಯೆ 5 – ಅಂತಿಮ ಆದೇಶದಂತೆ

ಈ ಕೆಳಕಂಡ ಕಾರಣಗಳಿಗಾಗಿಃ

**ಕಾರಣಗಳು**

8. **ಅಂಶ ಸಂಖ್ಯೆ 1 ರಿಂದ 4:** ಈ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ಹಾಗೂ ಪುನರಾವರ್ತಿತ ವಿಸ್ತೃತ ಚರ್ಚೆಯನ್ನು ತಡೆಯುವ ಉದ್ದೇಶದಿಂದ ಈ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

9. ಈ ಪ್ರಕಣರದಲ್ಲಿ ಪಿರ್ಯಾದುದಾರರಾದ ಚಾಸಾ.1/ಶಾಂತಮ್ಮರವರು ತಮ್ಮ ದೂರಿನಲ್ಲಿ ಆರೋಪಿಸುವುದೇನೆಂದರೆ, ದಿನಾಂಕ 29.06.2024 ರಂದು ಮಧ್ಯಾಹ್ನ 01.00 ಗಂಟೆ ಸಮಯದಲ್ಲಿ ಚನ್ನಗಿರಿ ತಾಲ್ಲೂಕು, ಸಂತೆಬೆನ್ನೂರು ಪೊಲೀಸ್ ಠಾಣೆಯ ವ್ಯಾಪ್ತಿಯ ದೊಡ್ಡೇರಿಕಟ್ಟೆ ಸರ್ವೆ ನಂ .11 ರ ಸರ್ಕಾರಿ ಅಮೃತ್ ಮಹಲ್ ಕಾವಲು ಜಮೀನಿನಲ್ಲಿ ಚಾಸಾ.4 ಮತ್ತು ಚಾಸಾ.1 ರವರು ಉಳುಮೆ ಮಾಡುತ್ತಿದ್ದಾಗ, ಆರೋಪಿತರು ಸದರಿ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ಚಾಸಾ.4 ರವರು ಬಿತ್ತನೆ ಮಾಡುವುದನ್ನು ತಡೆದಾಗ ಚಾಸಾ.4 ರವರು ಯಾಕೆ ನಮ್ಮ ಜಮೀನಿಗೆ ನುಗ್ಗಿ ತೊಂದರೆ ಕೊಡುತ್ತೀರಾ ಎಂದು ಕೇಳಿದಾಗ, ಆರೋಪಿತರು ಚಾಸಾ.4 ರವರಿಗೆ ಸೂಳೆ ಮಗನೇ ಬೋಳಿ ಮಗನೇ ಇದು ಸರ್ಕಾರಿ ಜಮೀನು ಎಂದು ಅವಾಚ್ಯ ಶಬ್ದಗಳಿಂದ ಬೈದ್ದು, 1 ಮತ್ತು 2 ನೇ ಆರೋಪಿತರು ಚಾಸಾ.1 ರವರ ಕೊರಳಪಟ್ಟಿ ಹಿಡಿದು ಮುಖಕ್ಕೆ, ಭುಜಕ್ಕೆ, ಕೈಕಾಲಿನಿಂದ ಹೊಡೆದು ಜಗಳ ಬಿಡಿಸಲು ಬಂದ ಚಾಸಾ.4 ರವರಿಗೆ ಹಿಡಿದು

ಎಳೆದಾಡಿ ನೆಲಕ್ಕೆ ಕೆಡವಿಕೊಂಡು ಹಲ್ಲೆ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿ ನಿಮ್ಮನ್ನು ಇವತ್ತು ಇಲ್ಲೇ ಸಾಯಿಸುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಆರೋಪಿಸಿ ದೂರನ್ನು ನೀಡಿದ ಮೇರೆಗೆ ಸಂತೆಬೆನ್ನೂರು ಪೊಲೀಸ್ ಠಾಣೆಯವರು ಆರೋಪಿತರ ವಿರುದ್ದ ಪ್ರಕರಣ ದಾಖಲಿಸಿರುತ್ತಾರೆ.

10. ಫ್ರಾಸಾ–01/ಶಾಂತಮ್ಮ/ಪಿರ್ಯಾದುದಾರರು ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ, ನಮ್ಮ ಮತ್ತು ಆರೋಪಿತರ ನಡುವೆ ಹೊಲದ ವಿಚಾರವಾಗಿ ಸುಮಾರು 6 ತಿಂಗಳ ಹಿಂದೆ ಏಪ್ರಿಲ್ ತಿಂಗಳಿನಲ್ಲಿ ಜಗಳ ನಡೆದಿರುತ್ತದೆ. ನಾವು ಕುಳೇನೂರು ಕವಲು ಗ್ರಾಮದ 2 ಎಕರೆ ಚಿಲ್ಲರೆ ಜಮೀನಿನಲ್ಲಿ ಕೃಷಿ ಕಾರ್ಯ ಮಾಡುವಾಗ ಅರೋಪಿತರು ಪದೇ ಪದೇ ಬಂದು ತೊಂದರೆ ಕೊಟ್ಟಿರುತ್ತಾರೆ. ನಾನು ಮತ್ತು ಚಾಸಾ.4 ರವರು ಮಧ್ಯಾಹ್ನ 1.00 ಗಂಟೆ ಸಮಯಕ್ಕೆ ಹೊಲದಲ್ಲಿ ಇದ್ದೆವು. 3 ಮತ್ತು 4 ನೇ ಆರೋಪಿತರು ಮತ್ತು ಇತರರು ಬಂದು ನಾವು ಬಿತ್ತಿದ ಬೆಳೆಯನ್ನು ಅಳಿಸಿ ಹಾಕಿರುತ್ತಾರೆ. ಅದನ್ನು ಕೇಳಲು ಹೋಗಿದ್ದಕ್ಕೆ 4 ನೇ ಆರೋಪಿ ಮತ್ತು ಆಕೆಯ ಮಕ್ಕಳು ನನ್ನ ಮತ್ತು ಚಾಸಾ.4 ರವರ ಮೇಲೆ ಹಲ್ಲೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ. 4 ನೇ ಆರೋಪಿ ನನಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ. ನಾನು ಬಿಡಿಸಿಕೊಳ್ಳಲು ಹೋದಾಗ ಉಗುರುಗಳಿಂದ ಪರಚಿರುತ್ತಾರೆ. ಸದರಿ ಸಮಯದಲ್ಲಿ ನನ್ನನ್ನು ಮತ್ತು ಚಾಸಾ.4 ಮತ್ತು ಆರೋಪಿತರನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ಸದರಿ ವಿಚಾರವಾಗಿ ನಾನು ದೂರನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಫ್ರಾಸಾ.1 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸಾಲಿಗೆ ಒಳಪಡಿಸಿದಾಗ ಫ್ರಾಸಾ.1

ರವರು ಅಭಿಯೋಜನೆಯ ಪ್ರಕರಣದ ಸಾರಾಂಶವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ಆರೋಪಿತರ ಪರ ವಕೀಲರು ಫ್ರಾಸಾ.1 ರವರನ್ನು ಪಾಟೀಸವಾಲಿಗೆ ಒಳಪಡಿಸಿದಾಗ ಫ್ರಾಸಾ.1 ರವರು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ.

11. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮರು ವಿಚಾರಣೆಗೆ ಒಳಪಡಿಸಿದರೂ ಸಹ ಸಾಕ್ಷಿಯು ಅಭಿಯೋಜಕರ ಸಲಹೆಯನ್ನು ನಿರಾಕರಿಸಿ ಅಲ್ಲಗಳೆದಿರುತ್ತಾರೆ. ಫ್ರಾಸಾ.1 ರವರು ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ನುಡಿದಿರುತ್ತಾರೆ.

12. ಫ್ರಾಸಾ.2/ಮಾನಾಚಾರಿ./ಗಾಯಾಳು ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯಲ್ಲಿ, ಈ ಪ್ರಕರಣದ ಬಗ್ಗೆ ನನಗೆ ಏನು ಗೊತ್ತಿಲ್ಲ. ಆರೋಪಿತರು ನನಗೆ ಅವಾಚ್ಯ ಬ್ದಗಳಿಂದ ಬೈದಿಲ್ಲ, ನನಗೆ ಹಲ್ಲೆ ಮಾಡಿ ಫ್ರಾಣ ಬೆದರಿಕೆ ಹಾಕಿರುವುದಿಲ್ಲ. ಚಾಸಾ.1 ರವರು ದೂರು ನೀಡಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಯಾವುದೇ ಚಿಕಿತ್ಸೆಯನ್ನು ಪಡೆದುಕೊಂಡಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದು ಪ್ರತಿಕೂಲ ಸಾಕ್ಷಿ ನುಡಿದಿರುತ್ತಾರೆ.

13. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದಾಗಲೂ, ಸಾಕ್ಷಿಯು ಅಭಿಯೋಜನೆಯ ಸಲಹೆಯನ್ನು ನಿರಾಕರಿಸಿ ಅಲ್ಲಗಳೆದಿರುತ್ತಾರೆ. ಫ್ರಾಸಾ.2 ರವರು ಪ್ರಕರಣಕ್ಕೆ ಸಂಬಂಧಿಸಿದಂತೆ

ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲವೆಂದು ನುಡಿದಿರುತ್ತಾರೆ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-4 ಎಂದು ಗುರುತಿಸಲಾಗಿದೆ.

14. ಸದರಿ ಫ್ರಾಸಾ-1 ಮತ್ತು 2 ರವರನ್ನು ಅಭಿಯೋಜನಾ ಪಕ್ಷವು ಪ್ರತಿಕೂಲ ಸಾಕ್ಷಿಗಳು ಎಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಿದಾಗಲೂ ಸಹ ಆರೋಪಿತರ ವಿರುದ್ಧ ನಂಬಲಾರ್ಹ ಸಾಕ್ಷ್ಯವನ್ನು ಸಾಬೀತುಪಡಿಸಲು ವಿಫಲವಾಗಿದೆ. ಈ ಅಂಶವನ್ನು ಮನಗಂಡು ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರು ವ್ಯತಿರಿಕ್ತ ಸಾಕ್ಷ್ಯ ನುಡಿದಿದ್ದು ಇನ್ನುಳಿದ ಸಾಕ್ಷಿದಾರರ ವಿಚಾರಣೆಯಿಂದ ಯಾವುದೇ ಉದ್ದೇಶ ಈಡೇರದ ಕಾರಣ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿದಾರರಿಗೆ ಸಮನ್ಸ್ ನೀಡಲು ಕೋರಿದ ಕೋರಿಕೆಯನ್ನು ಮೇಲ್ಕಂಡ ಕಾರಣಗಳಿಗಾಗಿ ನ್ಯಾಯಾಲಯ ನಿರಾಕರಿಸಿರುತ್ತದೆ.

15. ಮೇಲ್ಕಂಡ ಅಂಶಗಳನ್ನು ಪರಿಶೀಲಿಸಿದಾಗ, ಅಭಿಯೋಜನೆಯ ಪ್ರಕರಣವನ್ನು ಫ್ರಾಸಾ.1 ರವರು/ಪಿರ್ಯಾದುದಾರರು ಮತ್ತು ಫ್ರಾಸಾ.2 ರವರು/ಗಾಯಾಳು ಸಾಕ್ಷಿ ಮತ್ತು ಕೃತ್ಯ ಸ್ಥಳದ ಪಂಚನಾಮೆ ಸಾಕ್ಷಿ ಆಗಿದ್ದರೂ ಕೂಡ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಆದ್ದರಿಂದ ಅಭಿಯೋಜನೆಯು ತನ್ನ ಪ್ರಕರಣವನ್ನು ನಿಸ್ಸಂದೇಹವಾಗಿ ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತದೆ. ಆದ್ದರಿಂದ ಮೇಲ್ಕಂಡ **ಅಂಶ ಸಂಖ್ಯೆ 1 ರಿಂದ 4** ಅನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

16. **ಅಂಶ ಸಂಖ್ಯೆ 5**: ಈ ಮೇಲ್ಕಂಡ ಚರ್ಚೆಗಳ ಆಧಾರದಂತೆ, ಈ ಕೆಳಕಂಡಂತೆ ಆದೇಶಿಸಿದೆ.

## ಆದೇಶ

ಭಾರತೀಯ ನಾಗರೀಕ ಸುರಕ್ಷ ಸಂಹಿತ 271(1) ರಂತೆ ಪ್ರದತ್ತವಾದ ಅಧಿಕಾರದಂತೆ ಆರೋಪಿತರ ವಿರುದ್ಧ ಹೂಡಲಾದ ಶಿಕ್ಷಾರ್ಹ ಅಪರಾಧಗಳಾದ ಭಾರತೀಯ ದಂಡ ಸಂಹಿತೆ ಕಲಂ 447, 504, 323, 354 ಮತ್ತು 506 ಸಹವಾಚಕ ಕಲಂ 34 ರಡಿಯಲ್ಲಿ ದಾಖಲಾದ ಆರೋಪಗಳಿಂದ ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆಗೊಳಿಸಿದೆ.

ಆರೋಪಿತರ ಹಾಗೂ ಜಾಮೀನುದಾರರ ಜಾಮೀನು ಮುಚ್ಚಳಿಕೆಯು ಮೇಲ್ಮನವಿ ಅವಧಿಯವರೆವಿಗೂ ಜಾರಿಯಲ್ಲಿರುತ್ತದೆ.

(ಶೀಘ್ರಲಿಪಿಗಾರರಿಗೆ ಗಣಕಯಂತ್ರದಲ್ಲಿ ಉಕ್ತಲೇಖನ ನೀಡಿ, ಅವರು ಬೆರಳಚ್ಚು ಮಾಡಿದ ನಂತರ ಅದನ್ನು ಪರಿಷ್ಕರಿಸಿ, ತಿದ್ದುಪಡಿ ಮಾಡಿ ಈ ದಿವಸ ಅಂದರೆ ದಿನಾಂಕ 21 ನೇ ಜುಲೈ 2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.)

ಸಹಿ/-

**(ವಜ್ರೇಶ)**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**

## ಅನುಬಂಧ

**1. ಅಭಿಯೋಜನೆಯ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ಪಟ್ಟಿ:**

ಪ್ರಾಸಾ-1/ಚಾಸಾ-1 - ಶಾಂತಮ್ಮ

ಪ್ರಾಸಾ-2/ಚಾಸಾ-4 - ಮಾನಾಚಾರಿ

**2. ಅಭಿಯೋಜನೆಯ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರಃ**

ನಿಪಿ−1 − ದೂರು

ನಿಪಿ−2 − ಸ್ಥಳ ಮಹಜರ್

ನಿಪಿ−3 − ಭಾವಚಿತ್ರ

ನಿಪಿ−4 − ಪ್ರಾಸಾ.2 ರವರ ಹೇಳಿಕೆ

**3. ಆರೋಪಿತರ ಪರ ವಿಚಾರಣೆಗೊಳಪಟ್ಟ ಸಾಕ್ಷಿದಾರರ ವಿವರಃ**

− ಇಲ್ಲ −

**4. ಆರೋಪಿತರ ಪರ ಗುರುತಿಸಲ್ಪಟ್ಟ ದಾಖಲೆಗಳ ವಿವರಃ**

− ಇಲ್ಲ −

**5. ಅಭಿಯೋಜನೆಯು ಗುರುತಿಸಿರುವ ಮುದ್ದೆ ಮಾಲುಗಳ ಪಟ್ಟಿಃ**

− ಇಲ್ಲ −

ಸಹಿ/−

**(ವಜ್ರೇಶ)**

**2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಗಿರಿ.**